सरयू

# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

SARAYU - Kannada Monthly Regn. No. KARKAN/2014/62363
February Vol. : 9 Issue : 9 5124/ಶುಭಕೃತ್ ಸಂವತ್ಸರ 2023 ಫೆಬ್ರವರಿ ಪುಟ 8 Rs. 10/-

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24

## ಶ್ರೀರಾಮ ಪ್ರೌಢಶಾಲೆಯ ನೂತನ ಭವನದ ಶಿಲಾನ್ಯಾಸ

**14.01.2023**





42 ವರ್ಷಗಳ ಹಿಂದೆ ಪ್ರೌಢಶಾಲೆಯ ಮೂಲಕ ಆರಂಭಗೊಂಡ ಶ್ರೀರಾಮ ವಿದ್ಯಾಕೇಂದ್ರ ಇಂದು ಮಾತೃಭಾಷೆಯಲ್ಲಿ ಉಚಿತ ಶಿಕ್ಷಣ ನೀಡುವ ರಾಜ್ಯದ ಅತೀ ದೊಡ್ಡ ಶಾಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಜೊತೆಗೆ ಸಂಖ್ಯೆಯೂ 1000ದ ಸನಿಹದಲ್ಲಿದೆ. ಇದಕ್ಕಾಗಿ ನೂತನ ಭವನವೊಂದರ ಅವಶ್ಯಕತೆ ಇದ್ದು, ಆ ನಿಟ್ಟಿನಲ್ಲಿ ಶಿಲಾನ್ಯಾಸ ನೆರವೇರಿತು.

ಮುಂಬೈನ ಹೇರಂಬ ಇಂಡಸ್ಟ್ರೀಸ್ ಲಿಮಿಟೆಡ್ ಸಂಸ್ಥೆಯ ಚಯರ್‌ಮೆನ್ ಶ್ರೀ ಕೂಳೂರು ಕನ್ಯಾನ ಸದಾಶಿವ. ಶೆಟ್ಟಿ. ಇವರು ಶಿಲಾನ್ಯಾಸವನ್ನು ನೆರವೇರಿಸಿದರು.

ಡಾ ಪ್ರಭಾಕರ. ಭಟ್ ಕಲ್ಲಡ್ಕ, ಮುಂಬೈನ ಉದ್ಯಮಿ ಶ್ರೀ ಬಾಲಕೃಷ್ಣ ಭಂಡಾರಿ, ಶ್ರೀ ನಾರಾಯಣ ಸೋಮಯಾಜಿ, ಶ್ರೀ ವಸಂತ ಮಾಧವ, ಶ್ರೀ ರಮೇಶ್‌ಎನ್., ಶ್ರೀ ಗೋಪಾಲ.ಎಮ್ ಮತ್ತು ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.





## ಶ್ರೀರಾಮ ಸೆಕೆಂಡರಿ ಸ್ಕೂಲ್‌ನ ವಿಸ್ತರಣಾ ಕಟ್ಟಡದ ಭೂಮಿಪೂಜೆ 23.01.2023



ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಪ್ರಾರಂಭಗೊಂಡ ಶ್ರೀರಾಮ ಸೆಕೆಂಡರಿ ಸ್ಕೂಲ್ ಕಲ್ಲಡ್ಕ ಇದರ ನೂತನ ಕಟ್ಟಡದ ಶಿಲಾನ್ಯಾಸವನ್ನು ಮುಂಬೈನ ಉದ್ಯಮಿಗಳಾದ ಶ್ರೀ ರಜನಿಕಾಂತ್ ವರ್ಝು, ಶ್ರೀ ಶರದ್ ಶೆಟ್ಟಿ, ಐರಿಷ್ ಗ್ಲೋಬಲ್ ಮೀಡಿಯಾ, ಶ್ರೀ ರಾಕೇಶ್ ಕಶಮ್ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ವಿದ್ಯಾ ಸಂಸ್ಥೆಯ ಹಿರಿಯರು, ಆಡಳಿತ ಮಂಡಳಿ ಸದಸ್ಯರು, ವಿಭಾಗ ಮುಖ್ಯಸ್ಥರು, ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



### ಗಣ್ಯರ ಭೇಟಿ : 3.1.2023




ಅಮೇರಿಕಾದ ಹಿಂದೂ ಸ್ವಯಂಸೇವಕ ಸಂಘದ ಒಂದು ವಿಭಾಗದ ಮಾನ್ಯ ಸಂಘಚಾಲಕರಾದ ಶ್ರೀ ನಾರಾಯಣ್ ಚಾಂದಕ್, ಮುಂಬೈನ ಉದ್ಯಮಿ ಶ್ರೀ ನಾರಾಯಣ ಬಿ ಶೆಟ್ಟಿ, ಶ್ರೀ ಸಂದೇಶ ಹೆಗಡೆ, ರಾ.ಸ್ವ.ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಪ್ರಚಾರ ಪ್ರಮುಖ್ ಶ್ರೀ ಸುನಿಲ್ ಕುಲಕರ್ಣಿ, ಭೇಟಿ ನೀಡಿ ವಿದ್ಯಾರ್ಥಿಗಳು ಪ್ರದರ್ಶಿಸಿದ ಮಲ್ಲಕಂಬ, ಕೂಪಿಕಾ, ಸ್ಕೇಟಿಂಗ್, ಬೆಂಕಿ ಸಾಹಸ ಹಾಗೂ ಜಡೆಕೋಲಾಟ ವೀಕ್ಷಿಸಿದರು. ವಿದ್ಯಾಕೇಂದ್ರದ ಹಿರಿಯರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಶ್ರೀ ವಸಂತ ಮಾಧವ, ಶ್ರೀ ರಮೇಶ್ ಎನ್ ಹಾಗೂ ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು.

### ಜಂಪ್‌ರೋಪ್–ರಾಜ್ಯಕ್ಕೆ ದ್ವಿತೀಯ : 30.1.2023



ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ಉಪನಿರ್ದೇಶಕರ ಕಚೇರಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬೆಂಗಳೂರು ನಗರ ದಕ್ಷಿಣ ಜಿಲ್ಲೆ ಕಲಾಸಿಪಾಳ್ಯ, ಬೆಂಗಳೂರು ಇಲ್ಲಿ ನಡೆದ ಪ್ರಾಥಮಿಕ ಮತ್ತು ಪ್ರೌಢಶಾಲಾ ಬಾಲಕ/ಬಾಲಕಿಯರ ರಾಜ್ಯಮಟ್ಟದ ಜಂಪ್ ರೋಪ್ ಸ್ಪರ್ಧೆಯಲ್ಲಿ ಕಲ್ಲಡ್ಕ ಶ್ರೀರಾಮ ಪ್ರಾಥಮಿಕ ಶಾಲೆಯ 6ನೇ ತರಗತಿಯ ಗುರುನಂದನ್ ರೈ ದ್ವಿತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿರುತ್ತಾರೆ.

## ಶಿಶುಮಂದಿರ



ಪ್ರವಾಸ 29.01.2023: ಮಡಿಕೇರಿ ಓಂಕಾರೇಶ್ವರ ದೇವಸ್ಥಾನ, ಬೈಲುಕುಪ್ಪೆ ಗೋಲ್ಡನ್ ಟೆಂಪಲ್, ಹಾರಂಗಿ ಜಲಾಶಯ, ದುಬಾರೆ, ರಾಜ ಸೀಟ್ ಈ ಸ್ಥಳಗಳಿಗೆ ಪ್ರವಾಸವನ್ನು ಏರ್ಪಡಿಸಲಾಗಿತ್ತು. 83 ಮಂದಿ ಭಾಗವಹಿಸಿದ್ದರು.

## ಪ್ರಾಥಮಿಕ ಶಾಲೆ



**ಕನ್ಯಾಕುಮಾರಿ ಪ್ರವಾಸ 3.1.2023 ರಿಂದ 6.1.2023:** ಕನ್ಯಾಕುಮಾರಿ ಹಾಗೂ ತಿರವನಂತಪುರ ಶೈಕ್ಷಣಿಕ ಪ್ರವಾಸದಲ್ಲಿ ವಿವೇಕಾನಂದ ರಾಕ್ ಮೆಮೋರಿಯಲ್, ತಿರುವಳ್ಳುವರ್ ಮೂರ್ತಿ, ಏಕನಾಥ ರಾನಡೆ ಮಂದಿರಗಳಿಗೆ 81 ವಿದ್ಯಾರ್ಥಿಗಳು, 7 ಅಧ್ಯಾಪಕರು ಭೇಟಿ ನೀಡಿದರು.

## ಪ್ರಾಥಮಿಕ ಶಾಲೆ



**ಪ್ರತಿಭಾ ಪುರಸ್ಕಾರ : 11.1.2023**

ಪೂರ್ವಗುರುಕುಲದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಡೆಸಲಾಯಿತು. ವಿದ್ಯಾರ್ಥಿಗಳಿಗೆ ಹಲವಾರು ಆಟೋಟ ಸ್ಪರ್ಧೆಗಳು ಹಾಗೆಯೇ ಬೌದ್ಧಿಕ ಸ್ಪರ್ಧೆಯನ್ನು ನಡೆಸಲಾಗಿತ್ತು. ಅದರಲ್ಲಿ ವಿಜೇತರಾದವರಿಗೆ ಬಹುಮಾನವನ್ನು ವಿತರಣೆ ಮಾಡಲಾಯಿತು.



**ಪೋಷಕರ ಸಭೆ : 7.1.2023**

5ನೇ ತರಗತಿಯ ವಿದ್ಯಾರ್ಥಿಗಳಿಗೆ ಮೌಲ್ಯಾಂಕನ ಪರೀಕ್ಷೆಯ ಸಿದ್ದತೆಯ ಬಗ್ಗೆ ಪೋಷಕರ ಸಭೆ ನಡೆಸಲಾಯಿತು. ಸಂಚಾಲಕರಾದ ಶ್ರೀ ವಸಂತ ಮಾಧವ, ಮಾರ್ಗದರ್ಶನ ಮಾಡಿದರು.



**ಭಜನಾ ಕಾರ್ಯಕ್ರಮ : 20.1.2023**

ಕೇಶವನಗರ ಶ್ರೀ ಶಾರದಾಂಬ ಭಜನಾ ಮಂದಿರದ 35ನೇ ವಾರ್ಷಿಕೋತ್ಸವದಲ್ಲಿ 22 ಪೂರ್ವಗುರುಕುಲದ ವಿದ್ಯಾರ್ಥಿಗಳು ಕುಣಿತಭಜನೆ ಹಾಗೂ 40 ಹಿರಿಯ ವಿಭಾಗದ ವಿದ್ಯಾರ್ಥಿಗಳು ಭಜನಾ ಕಾರ್ಯಕ್ರಮ ನೀಡಿದರು.



ವಿವೇಕಾನಂದ ಜಯಂತಿ 12.1.2023: ವಿವೇಕಾನಂದರ 160 ನೇ ಜನ್ಮ ದಿನಾಚರಣೆಯ ಅಂಗವಾಗಿ 1 ರಿಂದ 7ನೇ ತರಗತಿಯ 443 ವಿದ್ಯಾರ್ಥಿಗಳು ವಿವೇಕಾನಂದರ ವೇಷಧರಿಸಿ ವೇದಿಕೆಯನ್ನು ಅಲಂಕರಿಸಿದ್ದರು.



**ಹಿರಿಯ ವಿಭಾಗ ಪ್ರತಿಭಾ ಪುರಸ್ಕಾರ : 13.1.2023**

ಕಾರ್ಯಕ್ರಮದಲ್ಲಿ 2022–23ನೇ ಶೈಕ್ಷಣಿಕ ವರ್ಷದಲ್ಲಿ ನಡೆದ ಬೌದ್ಧಿಕ ಹಾಗೂ ವಾರ್ಷಿಕ ಕ್ರೀಡಾಕೂಟದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.



**ಮೈಸೂರು ಪ್ರವಾಸ : 19.1.2023 ಮತ್ತು 20.1.2023 :** ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ ಮೂರು ಸ್ತರಗಳ ಪ್ರವಾಸಗಳ ಪೈಕಿ ಜನವರಿ 19 ಮತ್ತು 20 ರಂದು ಮೈಸೂರು, ಬೇಲೂರು, ಹಳೆಬೀಡು ಮತ್ತು ಶ್ರವಣ ಬೆಳಗೊಳಕ್ಕೆ 2 ದಿನಗಳ ಕಾಲದ ಪ್ರವಾಸ ಹಮ್ಮಿಕೊಂಡಿದ್ದು ಒಟ್ಟು 45 ವಿದ್ಯಾರ್ಥಿಗಳು ಹಾಗೂ 7 ಅಧ್ಯಾಪಕರು ಈ ಪ್ರವಾಸದಲ್ಲಿ ಪಾಲ್ಗೊಂಡಿದ್ದರು. ಆ ಮೂಲಕ ಪ್ರಾಥಮಿಕ ಶಾಲಾ ವಿಭಾಗದ ಎಲ್ಲಾ ವಿದ್ಯಾರ್ಥಿಗಳು ಪ್ರವಾಸದಲ್ಲಿ ಪಾಲ್ಗೊಂಡಂತಾಗಿದೆ.

## ಸುಭಾಷಿತ ಮಂಜರಿ

ವರ್ಜನೀಯೋ ಮತಿಮತಾ
ದುರ್ಜನಃ ಸಖ್ಯವೈರಯೋಃ।
ಶ್ವಾ ಭವತ್ಯುಪಘಾತಾಯ
ಲಿಹನ್ನಪಿ ದಶನ್ನಪಿ॥

**ಬುದ್ಧಿವಂತನಾದವನು ಸ್ನೇಹ ಮತ್ತು ದ್ವೇಷಗಳೆರಡಕ್ಕೂ ದುರ್ಜನನನ್ನು ದೂರಮಾಡಬೇಕು. ನಾಯಿ ನೆಕ್ಕಿದರೂ ಅಷ್ಟೆ, ಕಚ್ಚಿದರೂ ಅಷ್ಟೆ ಅಪಘಾತವೇ ಆಗುವುದು.**

**ಸುಭಾಷಿತ ಸುಧಾನಿಧಿ**

### ಸಂಪಾದಕೀಯ

**ಆತ್ಮೀಯ ಓದುಗರೇ,**

ದಕ್ಷಿಣಾಯನ ಕಳೆದು ಉತ್ತರಾಯಣ ಪುಣ್ಯ ಕಾಲಕ್ಕೆ ಪ್ರವೇಶಿಸಿದ್ದೇವೆ. ಮಕರ ಸಂಕ್ರಾಂತಿ ಹಾಗೂ ರಥ ಸಪ್ತಮಿ ಈ ಎರಡು ವಿಶೇಷತೆಗಳನ್ನು ಹೊಂದಿಸಿಕೊಂಡ ಜವರಿ ತಿಂಗಳ ವರದಿಯ ಸರಯೂ ಇದಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ ಮುಂದಿನ ದಿನಗಳಲ್ಲಿ ಪ್ರೌಢ ಹಾಗೂ ಅದರ ಮುಂದಿನ ಹಂತಗಳಾದ 11, 12ನೇ ತರಗತಿಗಳ ಯೋಜನೆಗನುಗುಣವಾಗಿ ಅವಶ್ಯವಿರುವ ಎರಡು ಪ್ರತ್ಯೇಕ ಕಟ್ಟಡಗಳಿಗೆ ಶಿಲಾನ್ಯಾಸವು ನೆರವೇರಿದೆ. ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ವಾರ್ಷಿಕ ಪರೀಕ್ಷೆಗಳನ್ನು ಗಮನದಲ್ಲಿರಿಸಿ ವಿವಿಧ ಮುಖಗಳಲ್ಲಿ ವಿಶೇಷ ತರಬೇತಿಗಳು ಆರಂಭಗೊಂಡಿದೆ.

ಶ್ರೀರಾಮ ಶಿಶುಮಂದಿರಕ್ಕೆ ಈ ಶೈಕ್ಷಣಿಕ ವರ್ಷದಲ್ಲಿ 200 ವಿದ್ಯಾರ್ಥಿಗಳು ದಾಖಲಾಗಿರುವುದು ಒಂದು ವಿಶೇಷವೇ ಸರಿ.

**ವಂದನೆಗಳೊಂದಿಗೆ**

**ಸಂಪಾದಕ ಬಳಗ**


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪ್ರೀತಿಕಾ (ಶಿಶುಮಂದಿರ)
ಚೈತ್ರ (ಪ್ರಾಥಮಿಕ ಶಾಲೆ)
ರಾಜೇಶ್ವರಿ (ಪ್ರೌಢಶಾಲೆ)
ಶ್ವೇತಾ (ಸೆಕೆಂಡರಿ ಸ್ಕೂಲ್)
ಗೋವಿಂದ ನಾರಾಯಣ (ಪಿಯುಸಿ)
ಪ್ರಸನ್ನಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


## ಶ್ರೀರಾಮ ಶಿಶುಮಂದಿರ
## ಕಲಿಕೆಯ ಹಾದಿಯಲ್ಲಿ ಈ ಬಾರಿ ಸೈಕಲ್ ಸವಾರಿ

ವ್ಯಕ್ತಿಯೊಬ್ಬನ ಸರ್ವಾಂಗೀಣ ವಿಕಾಸದ ಮೂಲ ಇರುವುದು ಆತನ ಬಾಲ್ಯದಲ್ಲಿ ಅದರಲ್ಲೂ ಶಿಶು ಹಂತದಲ್ಲಿ. ಅಲ್ಲಿ ಕಲಿತ ವಿದ್ಯೆ, ಕೌಶಲ್ಯ, ಆಟ, ಪಾಠ, ಶಿಸ್ತು, ಸಂಯಮ, ಬೇಕು–ಬೇಡಗಳೇ ಮುಂದಿನ ಜೀವನದ ತಳಪಾಯ ಎನ್ನುವುದು ಸಾಬೀತಾಗಿರುವ ಸತ್ಯ. ಅದಕ್ಕಾಗಿಯೇ ಶಿಶು ಶಿಕ್ಷಣವೆನ್ನುವುದು ನವ ನವೀನ ಚಟುವಟಿಕೆಗಳಿಗೆ ತೆರೆದ ಹೊಸತನವನ್ನು ಪ್ರಯೋಗಿಸಲು ಅವಕಾಶವಿರುವ ಮುಕ್ತ ಅಂಗಳವೆನ್ನಬಹುದು.

ಕಲ್ಲಡ್ಕದ ಶ್ರೀರಾಮ ವಿದ್ಯಾಕೇಂದ್ರ ಕಳೆದ 35 ವರ್ಷಗಳಿಂದ ಇಂತಹ ಹತ್ತಾರು ಹೊಸತನಗಳನ್ನು ಶಿಕ್ಷಣದಲ್ಲಿ ಅಳವಡಿಸಿಕೊಳ್ಳುತ್ತಾ ಬಂದಿದ್ದು, ಅದ–ಕ್ಕೆ ಈ ಬಾರಿಯ ಜೋಡಣೆ ಬೈಸಿಕಲ್. ಶಿಶುಗಳಿಗೆ ಎಳವೆಯಲ್ಲೇ ಹತ್ತಾರು ಗುಣಗಳನ್ನು ಕಲಿಸುವ (ಸಮತೋಲನ, ಸ್ವಾವಲಂಬನೆ, ಧೈರ್ಯ, ವಿಶ್ವಾಸ, ಪ್ರಕೃತಿ ಪ್ರೇಮ, ಸರಳತೆ, ದೈಹಿಕ ದೃಢತೆ, ಲಘು ವ್ಯಾಯಾಮ, ಮಿತ ವೇಗ, ನಿಯಂತ್ರಣ, ಇಂಧನ ರಹಿತ...) ಸೈಕಲ್ ಸವಾರಿಯನ್ನು ಶಿಕ್ಷಣದ, ಶಾಲಾ ಚಟುವಟಿಕೆಯ ಅಂಗವಾಗಿ ಯೋಜಿಸಿದೆ.

ಸಮತೋಲನ (ಬ್ಯಾಲೆನ್ಸ್) ಎಂಬುದೊಂದು ವಿಶೇಷ ಅನುಭವ ಹಾಗೂ ಕಲಿಕೆ. ಇದನ್ನು ಬೋಧನೆಯಿಂದ ಕಲಿಸಲು ಅಸಾಧ್ಯ. ಪ್ರಾಯೋಗಿಕ ಕಲಿಕೆಯಿಂದಷ್ಟೇ ಗ್ರಹಿಸಲು ಸಾಧ್ಯ. ಅದಕ್ಕಾಗಿ ಸುಮಾರು 10 ಮಕ್ಕಳಿಗೆ ಒಂದರಂತೆ ದ್ವಿಚಕ್ರ (ಬೈಸಿಕಲ್)ವನ್ನು ಅಭ್ಯಾಸಕ್ಕೆ ಇಳಿಬಿಡಲಾಯಿತು.

ಸಂಸ್ಥೆಯ ಹಿರಿಯರಾದ ಡಾ। ಪ್ರಭಾಕರ ಭಟ್ ಕಲ್ಲಡ್ಕ, ಶಿಶುಮಂದಿರ ವ್ಯವಸ್ಥಾಪನಾ ಸಮಿತಿಯ ಪದಾಧಿಕಾರಿಗಳು, ಆಡಳಿತ ಮಂಡಳಿ ಸದಸ್ಯರು, ವಿಭಾಗ ಮುಖ್ಯಸ್ಥರು, ಮಾತಾಜಿ ಹಾಗೂ ಸಹಾಯಕಿಯರು ಈ ಸಂತಸದ ಕ್ಷಣಕ್ಕೆ ಸಾಕ್ಷಿಗಳಾದರು.

### ರಥಸಪ್ತಮಿ ಅಂಗವಾಗಿ ಸೂರ್ಯನಮಸ್ಕಾರ ಸಪ್ತಾಹ

21.01.2023 ರಿಂದ 28.01.2023

ರಥಸಪ್ತಮಿ ಅಂಗವಾಗಿ ದೇಶದಾದ್ಯಂತ ನಡೆಸಲು ಉದ್ದೇಶಿಸಿದ ಸೂರ್ಯನಮಸ್ಕಾರ ಯಜ್ಞದ ಯೋಜನೆಯಂತೆ ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಸಾಮೂಹಿಕ ಸೂರ್ಯನಮಸ್ಕಾರ ಮತ್ತು ಸೂರ್ಯ ನಮಸ್ಕಾರ ಸಪ್ತಾಹ ನಡೆಯಿತು.

**ಶ್ರೀರಾಮ ಶಿಶುಮಂದಿರದ**ಲ್ಲಿ ಶಿಶುಮಂದಿರದ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಮಂಜುಳಾ ಇವರು ಮಕ್ಕಳಿಗೆ ಸೂರ್ಯನಮಸ್ಕಾರವನ್ನು ಮಾಡಿಸಿ ದಿನದ ವಿಶೇಷತೆಯನ್ನು ತಿಳಿಸಿದರು.

**ಪ್ರಾಥಮಿಕ ಶಾಲಾ** ವಿದ್ಯಾರ್ಥಿಗಳಿಗೆ ರಥಸಪ್ತಮಿ ಪ್ರಯುಕ್ತ ತರಗತಿವಾರು ಸೂರ್ಯನಮಸ್ಕಾರ ಮಾಡಿಸಲಾಯಿತು.

**ಪ್ರೌಢಶಾಲಾ ವಿದ್ಯಾರ್ಥಿಗಳಿಗೆ** ದೈಹಿಕ ಶಿಕ್ಷಕರಾದ ಪುರುಷೋತ್ತಮ ಮತ್ತು ಶ್ರೀಮತಿ ವೀಣಾ ಇವರು ಸೂರ್ಯ ನಮಸ್ಕಾರದ ಪ್ರಾತ್ಯಕ್ಷಿಕೆಯನ್ನು ನಡೆಸಿಕೊಟ್ಟರು. ಮುಖ್ಯೋಪಾಧ್ಯಾಯರು ಕಾರ್ಯಕ್ರಮದ ಬಗ್ಗೆ ಮಾತನಾಡಿದರು.

**ಸೂರ್ಯನಮಸ್ಕಾರ ಯಜ್ಞದ ಅಂಕಿ ಅಂಶಗಳು**

| | |
|---|---|
| ಶಿಶುಮಂದಿರ | 1000 |
| ಪ್ರಾಥಮಿಕ ಶಾಲೆ | 18100 |
| ಪ್ರೌಢಶಾಲೆ | 27476 |
| ಸೆಕೆಂಡರಿ ಸ್ಕೂಲ್ | 1210 |
| ಪದವಿ ಪೂರ್ವ | 20683 |
| ಪದವಿ | 3523 |

**ಒಟ್ಟು 71992**



**ಸಾಮೂಹಿಕ ಹುಟ್ಟುಹಬ್ಬ 31.01.2023**

ಜನವರಿ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟು ಹಬ್ಬದಲ್ಲಿ ಪದವಿಪೂರ್ವ ವಿಭಾಗದ ಇತಿಹಾಸ ಉಪನ್ಯಾಸಕರಾದ ಶ್ರೀ ರಮೇಶ್ ಶ್ರೀಮಾನ್ ಮಾತನಾಡಿ ಎಲ್ಲರಿಗೂ ಶುಭ ಹಾರೈಸಿದರು.

**ಮಾತೃಮಂಡಳಿ** 31.01.2023

ಶ್ರೀಕೃಷ್ಣ ಶಿಶುಮಂದಿರ ಕಂದೂರು ಇಲ್ಲಿ ನಡೆದ ಮಾತೃಮಂಡಳಿಯಲ್ಲಿ 10 ಮಾತೆಯರು ಉಪಸ್ಥಿತರಿದ್ದರು.

**ಮಕರಸಂಕ್ರಮಣ–ವಿವೇಕ ಜಯಂತಿ 14.1.23**

ಶ್ರೀರಾಮ ಶಿಶುಮಂದಿರ ಕಲ್ಲಡ್ಕದಲ್ಲಿ ನಡೆದ ಮಕರ ಸಂಕ್ರಮಣ ಹಾಗೂ ವಿವೇಕ ಜಯಂತಿ ಕಾರ್ಯಕ್ರಮದಲ್ಲಿ ಶ್ರೀರಾಮ ಪ್ರಾಥಮಿಕ ಶಾಲೆಯ ಜ್ಯೋತಿಶ್ರೀ ಮಾತಾಜಿ ದಿನದ ಮಹತ್ವವನ್ನು ತಿಳಿಸಿದರು. ಎಲ್ಲಾ ಮಕ್ಕಳಿಗೆ ಎಳ್ಳು ಬೆಲ್ಲ ಹಂಚಲಾಯಿತು.

**ಮಕರಸಂಕ್ರಾಂತಿ 14.01.2023**

**ಶ್ರೀಕೃಷ್ಣ** ಶಿಶುಮಂದಿರ ಸಜಿಪ ಕಂದೂರು ಇಲ್ಲಿ ಮಕರ ಸಂಕ್ರಾಂತಿ ಹಬ್ಬವನ್ನು ಶಿಶುಮಂದಿರದ ಮಕ್ಕಳಿಗೆ ಮತ್ತು ಸುತ್ತಮುತ್ತಲಿನ ಮನೆಗಳಿಗೆ ಎಳ್ಳುಬೆಲ್ಲ ಹಂಚಿ ಆಚರಿಸಲಾಯಿತು

**ಶ್ರೀ ಗಣೇಶ** ಶಿಶು ಮಂದಿರ ಬೊಂಡಾಲದಲ್ಲಿ 102 ಮನೆಗಳಿಗೆ ಹೋಗಿ ಎಳ್ಳು ಬೆಲ್ಲ ಹಂಚಲಾಯಿತು.

**ಅಕ್ಕಮಹಾದೇವಿ** ಶಿಶುಮಂದಿರ ಅಜ್ಜಿಬೆಟ್ಟು ಇಲ್ಲಿ ಮಕರ ಸಂಕ್ರಾಂತಿ ಪ್ರಯುಕ್ತ 150 ಮನೆಗೆ ಹೋಗಿ ಎಳ್ಳು ಬೆಲ್ಲ ಹಂಚಲಾಯಿತು.

**ಸರಸ್ವತಿ** ಶಿಶು ಮಂದಿರ ಕೊಪ್ಪಲಕೋಡಿಯಲ್ಲಿ ಮಕರ ಸಂಕ್ರಾಂತಿ ಪ್ರಯುಕ್ತ 100 ಮನೆಗೆ ಹೋಗಿ ಎಳ್ಳು ಬೆಲ್ಲ ಹಂಚಲಾಯಿತು..

## ಪ್ರಾಥಮಿಕ ಶಾಲೆ

**ಕಿರಿಯ ವಿಭಾಗ ಪ್ರತಿಭಾ ಪುರಸ್ಕಾರ : 11.1.2023**

ಈ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದ ಆಟೋಟ ಸ್ಪರ್ಧೆಗಳು ಹಾಗೂ ಬೌದ್ಧಿಕ ಸ್ಪರ್ಧೆಯನ್ನು ನಡೆಸಲಾಗಿತ್ತು. ಅದರಲ್ಲಿ ವಿಜೇತರಾದವರಿಗೆ ಬಹುಮಾನವನ್ನು ವಿತರಿಸುವ ಪ್ರತಿಭಾ ಪುರಸ್ಕಾರದ ವೇದಿಕೆಯಲ್ಲಿ ಬಾಳ್ತಿಲ ಗ್ರಾಮ ಪಂಚಾಯತ್‌ನ ಅಧ್ಯಕ್ಷರಾದ ಕುಮಾರಿ ಹಿರಣ್ಮಯಿ, ರಾಷ್ಟ್ರ ಸೇವಿಕಾ ಸಮಿತಿ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯಕಾರಿಣಿ ಸದಸ್ಯರಾದ ಶ್ರೀಮತಿ ಡಾ॥ ಕಮಲಾ ಪ್ರಭಾಕರ್ ಭಟ್, ಜಿಲ್ಲಾ ಪಂಚಾಯತ್ ಸದಸ್ಯರಾದ ವಿಜಯ ಪ್ರಭು, ಶ್ರೀ ರಾಮ ಪ್ರೌಢ ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀಮತಿ ವಸಂತಿ, ಬಾಳ್ತಿಲ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯಾದ ಡಾ॥ ರೋಶಿನಿ, ಬಾಳ್ತಿಲ ಆರೋಗ್ಯ ಕೇಂದ್ರದ ಶ್ರೀಮತಿ ಸರಸ್ವತಿ, ವಲಯದ ಶಿಕ್ಷಣ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಪ್ರತಿಮಾ, ಬಾಳ್ತಿಲ ಗ್ರಾಮದ ಆಡಳಿತ ಅಧಿಕಾರಿಯಾದ ಶ್ರೀಮತಿ ಯಶ್ವಿತಾ, ಪ್ರಾಥಮಿಕ ವಿಭಾಗದ ಶೈಕ್ಷಣಿಕ ಪರಿವೀಕ್ಷರಾದ ಶ್ರೀಮತಿ ಮಲ್ಲಿಕಾ ಆರ್ ಶೆಟ್ಟಿ, ಹಾಗೆಯೇ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

**ಹಿರಿಯ ವಿಭಾಗ ಪ್ರತಿಭಾ ಪುರಸ್ಕಾರ : 13.1.2023**

ವೇದಿಕೆಯಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಮಂಗಳೂರು, ಅತ್ತಾವರ, ಭಾರತೀಯ ಆದಾಯ ತೆರಿಗೆ ಇಲಾಖೆಯ ಇನ್ಸ್‌ಪೆಕ್ಟರ್ ರವಿಕಿರಣ್. ಕೆ ಹಾಗೂ ಚಂದ್ರಮೋಹನ್ ಪಾಂಡೇಶ್ವರ, ಕಬಕ, ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಪ್ರೇಮಲತಾ ಜಯರಾಮ ರೈ ಕರಿಂಕ, ವಿಟ್ಲ, ಜೇಸಿಸ್ ಆಂಗ್ಲ ಮಾಧ್ಯಮ ಶಾಲೆಯ ಕಾರ್ಯದರ್ಶಿಗಳಾದ ಮೋಹನ ಎ ಮೈರ, ವಿಟ್ಲ ರೋಟರಿ ಕ್ಲಬ್‌ನ ಪೂರ್ವಾಧ್ಯಕ್ಷರು ಸಂಜೀವ ಪೂಜಾರಿ, ಬಂಟ್ವಾಳ ತಾಲೂಕಿನ ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿಯಾಗಿರುವ ವಿಷ್ಣು ಹೆಬ್ಬಾರ್, ಸೌತ್ ಝೋನ್ ಕ್ರಿಕೆಟ್ ಪ್ಲೇಯರ್ ಹಾಗೂ ಭಾರತ ಸ್ವದೇಶಿ ಕಂಪೆನಿಯಾದ ಮೋದಿಕೇರ್ ಬಿ.ಡಿ.ಡಿ ಅನೀಶ್ ಆಳ್ವ ಮಾಣಿ, ಬಾಳ್ತಿಲ ಕ್ಲಸ್ಟರ್‌ನ ಸಿ.ಆರ್.ಪಿ. ಸತೀಶ್ ರಾವ್, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ಚೆನ್ನಪ್ಪ ಆರ್ ಕೋಟ್ಯಾನ್ ಹಾಗೂ ಮುಖ್ಯೋಪಾಧ್ಯಾಯರಾದ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

**ಮಕರ ಸಂಕ್ರಮಣ ಆಚರಣೆ : 14.1.2023**

ಮಕರ ಸಂಕ್ರಮಣ ಹಬ್ಬದ ಮಹತ್ವವನ್ನು ಶ್ರೀಮತಿ ಅನ್ನಪೂರ್ಣ ಎನ್ ಭಟ್ ಮಾತಾಜಿ ಇವರು ತಿಳಿಸಿದರು. 4ನೇ ತರಗತಿಯ ಅಪ್ರಮೇಯ ಸಂಕ್ರಾಂತಿ ಗೀತೆ ಹಾಡಿದನು. ಕಾರ್ಯಕ್ರಮದ ಕೊನೆಯಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ಎಳ್ಳು ಬೆಲ್ಲ ಹಂಚಲಾಯಿತು.

**ರಂಗಮಂಚ : 13.1.2023**

ಪೂರ್ವಗುರುಕುಲದ 3ನೇ ತರಗತಿಯ ರಂಗಮಂಚ ಕಾರ್ಯಕ್ರಮದಲ್ಲಿ 115 ವಿದ್ಯಾರ್ಥಿಗಳು ಭಾಗವಹಿಸಿದ್ದರು. ದೇವರ ಸ್ತುತಿ ಜನಪದ ನೃತ್ಯ, ಕುಣಿತ ಭಜನೆ, ಇಂಗ್ಲೀಷ್ ಹಾಡು ಮತ್ತು ನೃತ್ಯಗಳು, ಯಕ್ಷಗಾನ , ವಯೋಲಿನ್ ನುಡಿಸುವುದು, ನೃತ್ಯ, ಹಾಡು ಇತ್ಯಾದಿ ವೈಯಕ್ತಿಕ ಪ್ರದರ್ಶನಗಳನ್ನು ನೀಡಿದರು.

**ಅಧ್ಯಾಪಕರ ಬೈಠಕ್ : 26.1.2023**

26.1.2023ರಂದು ವೇದವ್ಯಾಸ ಧ್ಯಾನಮಂದಿರದಲ್ಲಿ ಅಧ್ಯಾಪಕರ ಬೈಠಕ್ ನಡೆಯಿತು. ಮನೆಭೇಟಿ ಹಾಗೂ ಮುಂದಿನ ಕಾರ್ಯಕ್ರಮಗಳ ಕುರಿತು ಚರ್ಚಿಸಲಾಯಿತು

**ಭಜನೆ – ಸಾಮೂಹಿಕ ಹುಟ್ಟುಹಬ್ಬ : 28.1.2023**

ಪೂರ್ವಗುರುಕುಲ: ಹುಟ್ಟುಹಬ್ಬ ಹಾಗೂ ಭಜನೆಯ ಮಹತ್ವವನ್ನು ಶೋಭಾ ಮಾತಾಜಿ ತಿಳಿಸಿಕೊಟ್ಟರು. ವೇದಿಕೆಯಲ್ಲಿ ಅತಿಥಿಗಳಾಗಿ ಪೋಷಕರಾದ ಶ್ರೀಮತಿ ಭವ್ಯಶ್ರೀ, ಶ್ರೀಮತಿ ಶಶಿಕಲಾ, ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು

**ಹಿರಿಯ ವಿಭಾಗ : ಹುಟ್ಟುಹಬ್ಬ ಹಾಗೂ ಭಜನೆಯ** ಮಹತ್ವವನ್ನು ಪ್ರೌಢಶಾಲೆಯ ಅಧ್ಯಾಪಕರಾದ ಶ್ರೀ ಶಿವರಾಜ್ ತಿಳಿಸಿಕೊಟ್ಟರು. ವೇದಿಕೆಯಲ್ಲಿ ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ ಇದರ ವ್ಯವಸ್ಥಾಪಕರಾದ ಜಗದೀಶ ಹಾಗೂ ಅವರ ಪತ್ನಿ ಹರಿಣಾಕ್ಷಿ, ಅಧ್ಯಾಪಕರಾದ ದೇವಿಕಾ ಹಾಗೂ ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು.

**7ನೇ ತರಗತಿ ಪೋಷಕರ ಸಭೆ : 28.1.2023**

28.1.2023ರಂದು 7ನೇ ತರಗತಿಯ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಪೋಷಕರ ಸಭೆ ಕರೆಲಾಯಿತು. ಒಟ್ಟು 69 ಪೋಷಕರು ಈ ಸಭೆಯಲ್ಲಿ ಪಾಲ್ಗೊಂಡಿದ್ದರು.

**ಪ್ರಸಾದ ಪ್ಯಾಕಿಂಗ್ : 31.1.2023**

ಸರಸ್ವತಿ ಪೂಜೆಯ ಪ್ರಯುಕ್ತ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳು 4000 ಕುಂಕುಮ ಪ್ರಸಾದ ಪ್ಯಾಕಿಂಗ್ ಮಾಡಿದರು.

## ಪ್ರೌಢಶಾಲೆ

**ಅತಿಥಿಗಳ ಭೇಟಿ 17.1.2023**



ಶ್ರೀ ಮಹೇಂದ್ರ ಬಾಯಿ ಭಟ್– ಗುಜರಾತ್ ಮಾಜಿ ಪಬ್ಲಿಕ್ ಸರ್ವಿಸ್ ಕಮಿಷನ್ ಇದರ ಚೆಯರ್‌ಮೆನ್ ಮತ್ತು ಪ್ರಚಾರಕರು, ಶ್ರೀ ದಿನೇಶ್ ಕುಮಾರ್ ಎನ್. ಜೋಷಿ (ಸಿ.ಎ), ಡಾ ಕೃಷ್ಣಪ್ರಸಾದ್ – ಪ್ರಸಾದ್ ನೇತ್ರಾಲಯ ಉಡುಪಿ, ಶ್ರೀ ನರೇಶ್ ಶರ್ಮ, ಅಧ್ಯಕ್ಷರು ಗುಜರಾತ್ ಟೆಕ್ಸ್‌ಟೈಲ್ ಅಸೋಸಿಯೇಷನ್, ಶ್ರೀ ಮಾ.ಸ. ನಂಜುಂಡಸ್ವಾಮಿ ಹಾಗೂ ಶ್ರೀಮತಿ ಜ್ಯೋತಿ ದಂಪತಿಗಳು– ಅಧ್ಯಕ್ಷರು, ಬ್ರಾಹ್ಮಣ ಮಹಾಸಭಾ ಶಿವಮೊಗ್ಗ, ಮೊದಲಾದವರು ಆಗಮಿಸಿದರು. ವೇದಿಕೆಯಲ್ಲಿ ಡಾ ಪ್ರಭಾಕರ ಭಟ್ ಕಲ್ಲಡ್ಕ, ಅಧ್ಯಕ್ಷರು–ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು, ಡಾ ಕಮಲಾ ಪ್ರಭಾಕರ ಭಟ್ ಕಲ್ಲಡ್ಕ, ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ, ಸಹಸಂಚಾಲಕರು ಶ್ರೀ ರಮೇಶ್. ಎನ್, ಆಡಳಿತ ಮಂಡಳಿ ಸದಸ್ಯರು, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

**ಗಣ್ಯ ಅತಿಥಿಗಳ ಭೇಟಿ 2.1.2023**

ಪ್ರೌಢಶಾಲೆಯ ಸರಸ್ವತಿ ವಂದನೆಯಲ್ಲಿ ರಾಜ್ಯ ರೈತ ಮೋರ್ಚ ಸಂಘದ ಕಾರ್ಯದರ್ಶಿ ಶ್ರೀ ಪಾಲಾಕ್ಷಗೌಡ ಹಾಗೂ ರಾಣಿಬೆನ್ನೂರಿನ ಶ್ರೀ ಶಿವಲಿಂಗಪ್ಪ, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

**ಸ್ವಾಮಿ ವಿವೇಕಾನಂದ ಜಯಂತಿ 13.1.2023**

ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ಸ್ವಾಮಿ ವಿವೇಕಾನಂದ ದಿನಾಚರಣೆಯನ್ನು ಆಚರಿಸಲಾಯಿತು. ಶ್ರೀರಾಮ ಪದವಿಪೂರ್ವ ಕಾಲೇಜಿನ ಇತಿಹಾಸ ಪ್ರಾಧ್ಯಾಪಕರಾದ ಶ್ರೀ ರಮೇಶ್ ಶ್ರೀಮಾನ್ ದೀಪ ಪ್ರಜ್ವಲನೆಗೈದು ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ವಿವೇಕಾನಂದರ ಆದರ್ಶಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ವೇದಿಕೆಯಲ್ಲಿ ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್ ಎಂ. ಉಪಸ್ಥಿತರಿದ್ದರು. ವಿದ್ಯಾರ್ಥಿ ದೀವಿಕಾ ಸ್ವಾಗತಿಸಿ ಜಯಶ್ರೀ ಧನ್ಯವಾದಗೈದರು.

**ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮ 19.1.23**

ಅಮ್ಮೂರಿನ ಕೇಶವ ನಗರ ಶ್ರೀ ಶಾರದಾಂಬ ಭಜನಾ ಮಂದಿರದ 35ನೇ ವರ್ಷದ ಭಜನಾ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರೌಢಶಾಲಾ ತಂಡ ಭಜನಾ ಕಾರ್ಯಕ್ರಮವನ್ನು ನಡೆಸಿದರು.

**ಪೋಷಕರ ಸಭೆ 24.01.23**

10ನೇ ತರಗತಿ ವಿದ್ಯಾರ್ಥಿಗಳ ಪರೀಕ್ಷಾ ಸಿದ್ಧತೆ ಮತ್ತು ಫಲಿತಾಂಶವನ್ನು ಉನ್ನತೀಕರಿಸುವ ದೃಷ್ಟಿಯಿಂದ ವಸತಿ ವ್ಯವಸ್ಥೆ ಕಲ್ಪಿಸುವ ಬಗ್ಗೆ ಪೋಷಕರ ಸಭೆಯನ್ನು ನಡೆಸಲಾಯಿತು.

**ರಾಷ್ಟ್ರೀಯ ಮತದಾರರ ದಿನ 25.01.23**



ರಾಷ್ಟ್ರೀಯ ಮತದಾರರ ದಿನದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಪ್ರತಿಜ್ಞೆಯನ್ನು ಸ್ವೀಕರಿಸಿದರು. ಅಧ್ಯಾಪಕರಾದ ಶ್ರೀ ಜಿನ್ನಪ್ಪ ಶ್ರೀಮಾನ್ ಮತದಾನದ ಜಾಗೃತಿಯ ಬಗ್ಗೆ ಮಾಹಿತಿ ತಿಳಿಸಿದರು. 9ನೇ ತರಗತಿ ವಿದ್ಯಾರ್ಥಿಗಳಾದ ಗಗನ್ ಸ್ವಾಗತಿಸಿ, ಪ್ರತಿಜ್ಞೆಯನ್ನು ಅನುಷಾ ಮತ್ತು ಧನ್ಯವಾದವನ್ನು ಶ್ರದ್ಧಾ ಮಾಡಿದರು.

**ಗಣರಾಜ್ಯ ದಿನಾಚರಣೆ 26/01/2023**

ಗಣರಾಜ್ಯೋತ್ಸವನ್ನು ಕಾರ್ಯಕ್ರಮವನ್ನು ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ ಎಂ. ಇವರು ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು. ಶ್ರೀ ಪ್ರಶಾಂತ್ ಶ್ರೀಮಾನ್ ಸಂವಿಧಾನ ರಚನೆಯ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಶ್ರೀ ಶಿವರಾಜ್ ಶ್ರೀಮಾನ್ ಸ್ವಾಗತಿಸಿ, ಶ್ರೀ ಕೊಟ್ರೇಶ್ ಶ್ರೀಮಾನ್ ವಂದಿಸಿದರು.

**ಹುಟ್ಟುಹಬ್ಬದ ಆಚರಣೆ ಮತ್ತು ಭಜನೆ 10.1.23**

ಶ್ರೀರಾಮ ಸೆಕೆಂಡರಿ ಸ್ಕೂಲ್‌ನಲ್ಲಿ ಸಾಮೂಹಿಕ ಹುಟ್ಟುಹಬ್ಬ ಮತ್ತು ಭಜನಾ ಕಾರ್ಯಕ್ರಮವು ನಡೆಯಿತು. ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ವಿದ್ಯಾರ್ಥಿಗಳು ಪುಷ್ಪಾರ್ಚನೆ ಮತ್ತು ನಿಧಿ ಸಮರ್ಪಣೆ ಮಾಡಿ ಮಾತಾಜಿಗಳಿಂದ ತಿಲಕಧಾರಣೆ ಮತ್ತು ಆರತಿ ಬೆಳಗಿಸಿಕೊಂಡು ಆಶೀರ್ವಾದ ಪಡೆದರು.

**ಬೈಠಕ್ 11.01.2023**

ಶ್ರೀರಾಮ ಸೆಕೆಂಡರಿ ಸ್ಕೂಲ್‌ನಲ್ಲಿ ಮಾಸಿಕ ಬೈಠಕ್ ನಡೆಯಿತು. ಸಂಚಾಲಕರಾದಂತಹ ವಸಂತ ಮಾಧವ ಶ್ರೀಮಾನ್ ಮತ್ತು ಲಕ್ಷ್ಮೀರಘುರಾಜ್ ಇವರು ಪಾಲ್ಗೊಂಡಿದ್ದರು.

**ಸ್ವಾಮಿ ವಿವೇಕಾನಂದ ಜನ್ಮದಿನಾಚರಣೆ 12.01.23**

ಸ್ವಾಮಿ ವಿವೇಕಾನಂದರ ಜಯಂತಿ ಆಚರಣೆಯ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀರಾಮ ಸೆಕೆಂಡರಿ ಸ್ಕೂಲ್‌ನ ದೈಹಿಕ ಶಿಕ್ಷಣ ಶಿಕ್ಷಕರಾದ ರಾಜೇಶ್ ಕುಮಾರ್ ಶ್ರೀಮಾನ್ ಅವರು ವಹಿಸಿದ್ದರು. ವಿದ್ಯಾರ್ಥಿಗಳಾದ ಅದಿತಿ, ಬಿ.ವಿ ತೀರ್ಥಶ್ರೀ , ಚಿರಾಗ್, ಚಿನ್ಮಯ್ ವಿವೇಕಾನಂದರ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀಮಾನ್, ಮಾತಾಜಿಯವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರ್ವಹಣೆಯನ್ನು ವಿದ್ಯಾರ್ಥಿನಿ ತೀರ್ಥಶೆಟ್ಟಿ ನಿರ್ವಹಿಸಿದರು.

**ಶ್ರೀರಾಮ ಸೆಕೆಂಡರಿ ಸ್ಕೂಲ್ ಮತ್ತು ಪ.ಪೂ ವಿಭಾಗದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ 13.01.23**

ಶ್ರೀರಾಮ ಸೆಕೆಂಡರಿ ಸ್ಕೂಲ್ ಮತ್ತು ಪ.ಪೂ ವಿದ್ಯಾಲಯದ ಪ್ರತಿಭಾ ಪುರಸ್ಕಾರವನ್ನು ಜಂ-ಟಿಯಾಗಿ ಆಚರಿಸಲಾಯಿತು. ಸಮಾರಂಭದಲ್ಲಿ ಡಾ॥ ಕಲ್ಲಡ್ಕ ಪ್ರಭಾಕರ್ ಭಟ್, ಶ್ರೀ ಶಾರದಾ ಪ್ರೌಢಶಾಲೆಯ ಸಂಚಾಲಕರಾದ ಡಾ॥ ಶ್ರೀ ವಿಶ್ವನಾಥ್ ನಾಯಕ್, ಸಂಚಾಲಕರಾದ ಶ್ರೀ ವಸಂತ ಮಾಧವ, ಆಡಳಿತ ಮಂಡಳಿಯ ಶ್ರೀ ನಾಗೇಶ್ ಕಲ್ಲಡ್ಕ, ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್, ಶ್ರೀರಾಮ ಸೆಕೆಂಡರಿ ಸ್ಕೂಲ್‌ನ ಉಪಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ಇವರು ಉಪಸ್ಥಿತರಿದ್ದರು. ಕ್ರೀಡೆ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ವಿಶೇಷ ಸಾಧನೆಗೈದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

**ರಾಷ್ಟ್ರೀಯ ಮತದಾನ ದಿನಾಚರಣೆ 25.1.23**

ಶ್ರೀರಾಮ ಸೆಕೆಂಡರಿ ಸ್ಕೂಲ್‌ನಲ್ಲಿ ರಾಷ್ಟ್ರೀಯ ಮತದಾನ ದಿನವನ್ನು ಆಚರಿಸಲಾಯಿತು. ಪದವಿ ಪೂರ್ವ ಇತಿಹಾಸ ವಿಭಾಗದ ಶ್ರೀ ರಮೇಶ್ ಶ್ರೀಮಾನ್ ಮತದಾನದ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಶಿಕ್ಷಕೇತರ ಸಿಬ್ಬಂದಿಗಳು ಭಾಗವಹಿಸಿದರು.

**ಪರೀಕ್ಷಾ-ಪೆ-ಚರ್ಚಾ 27.1.23**

2023ನೇ ಸಾಲಿನ ಪರೀಕ್ಷಾ-ಪೆ-ಚರ್ಚಾ ಎಂಬ ಪ್ರಧಾನ ಮಂತ್ರಿಯವರ ಕಾರ್ಯಕ್ರಮವನ್ನು ಟಿವಿಯ ಮುಖಾಂತರ ವಿದ್ಯಾರ್ಥಿಗಳು ವೀಕ್ಷಿಸಿದರು.

**ಸ್ವಾಮಿ ವಿವೇಕಾನಂದರ ಜನ್ಮ ದಿನ 12/01/23**

ಸ್ವಾಮಿ ವಿವೇಕಾನಂದರ ಜನ್ಮದಿನದಂದು ಶ್ರೀರಾಮ ವಿದ್ಯಾಕೇಂದ್ರದ ಹಿರಿಯ ವಿದ್ಯಾರ್ಥಿ ಮತ್ತು ಶ್ರೀರಾಮ ಸೌಹಾರ್ದ ಸಹಕಾರಿ ಬ್ಯಾಂಕಿನ ಸಿ.ಇ.ಓ ಶ್ರೀ ಜಗದೀಶ್ ಇವರು ವಿವೇಕಾನಂದರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ದೀಪ ಬೆಳಗಿದರು. ಕನ್ನಡ ಉಪನ್ಯಾಸಕರಾದ ಶ್ರೀ ಅಶೋಕ್ ಕುಮಾರ್ ವಿವೇಕಾನಂದರ ಜೀವನ ಸಾಧನೆಗಳನ್ನು ವಿದ್ಯಾರ್ಥಿಗಳು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ವಹಿಸಿದ್ದರು.

## ಪದವಿ

**ವೇಣುವಾದನ ತರಗತಿ 04.01.2023**

ವೇಣುವಾದನ ತರಗತಿಯಲ್ಲಿ ದ್ವಿತೀಯ ವರ್ಷದ 18 ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಇದನ್ನು ಶ್ರೀ ಉಮೇಶ್ ಕುಲಕರ್ಣಿ ಅವರು ಪ್ರೇರಣಾ ಭವನದಲ್ಲಿ ನಡೆಸಿಕೊಟ್ಟರು. ಭೌತಶಾಸ್ತ್ರ ಉಪನ್ಯಾಸಕಿ ಕು. ಪ್ರೀತಿ ಮಾತಾಜಿ ತರಗತಿಯಲ್ಲಿ ಉಪಸ್ಥಿತರಿದ್ದರು.

**BCA ವಿದ್ಯಾರ್ಥಿಗಳ ಪಾಲಕರ ಸಭೆ: 4.1.23**

ಪ್ರಥಮ BCA ವಿದ್ಯಾರ್ಥಿಗಳ ಪಾಲಕರ ಸಭೆಯು ಸಂಪನ್ನಗೊಂಡಿತು. ಆಡಳಿತ ಮಂಡಳಿಯ ಸದಸ್ಯೆ ಶ್ರೀಮತಿ ಲಕ್ಷ್ಮೀ ರಘುರಾಜ್, ಪ್ರಾಂಶುಪಾಲರಾದ ಶ್ರೀ ಕೃಷ್ಣಪ್ರಸಾದ್, ಗಣಕಶಾಸ್ತ್ರ ಉಪನ್ಯಾಸಕಿಯರಾದ ಶ್ರೀಮತಿ ಸ್ವಸ್ತಿಕಾ ಹಾಗೂ ಧನ್ಯಶ್ರೀ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

**ಸ್ವಾಮಿ ವಿವೇಕಾನಂದ ಜಯಂತಿ 12.01.2023**



ಪ್ರಥಮ ದರ್ಜೆ ಮಹಾವಿದ್ಯಾಲಯ ಹಾಗೂ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಇವರ ಸಹಯೋಗದೊಂದಿಗೆ ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ಪ್ರೇರಣಾ ಭವನದಲ್ಲಿ ಸ್ವಾಮಿ ವಿವೇಕಾನಂದ ಜಯಂತಿಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷರಾದ ಶ್ರೀರಾಮ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಶ್ರೀ ಬಾಲಕೃಷ್ಣ ಅವರು ಬೌದ್ಧಿಕ್ ನೀಡಿ-ದರು. ಶ್ರೀಮತಿ ಸುಕನ್ಯಾ, ABVP, ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯಕಾರಿಣಿ ಸದಸ್ಯರಾದ ಶ್ರೀ ಪ್ರತೀಕ್ ಬಂಟ್ವಾಳ ಹಾಗೂ ಧೀರಜ್ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಾಣಿಜ್ಯ ವಿದ್ಯಾರ್ಥಿ ನಾಮದೇವ್ ಸ್ವಾಗತಿಸಿ, ಕಲಾ ವಿಭಾಗದ ವಿದ್ಯಾರ್ಥಿ ರಾಕೇಶ್ ವಂದಿಸಿ, ಗಣ-ಕ ವಿಜ್ಞಾನ ವಿಭಾಗದ ಕು. ಸ್ವಾತಿ ಕಾರ್ಯಕ್ರಮ ನಿರೂಪಿಸಿದರು.

**"ಯುವ ಸಪ್ತಾಹ ಮತ್ತು ವಿವೇಕ ರಥ ಯುವ ಪಥ" ಯುವಜನ ಜಾಗೃತಿ ಕಾರ್ಯಕ್ರಮ** 13.01.23

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, (ದ. ಕ), ದ. ಕ ಜಿಲ್ಲಾ ಯುವಜನ ಒಕ್ಕೂಟ ಮಂಗಳೂರು, ತಾಲೂಕು ಯುವಜನ ಒಕ್ಕೂಟ ಬಂಟ್ವಾಳ ಹಾಗೂ ಶ್ರೀರಾಮ ಪ್ರಥಮ ದರ್ಜೆ ಕಾಲೇಜು ಕಲ್ಲಡ್ಕ ಇವರ ಸಹಯೋಗದಲ್ಲಿ ಸ್ವಾಮಿ ವಿವೇಕಾನಂದರ ಜನ್ಮದಿನ ಪ್ರಯುಕ್ತ "ಯುವ ಸಪ್ತಾಹ ಮತ್ತು ವಿವೇಕ ರಥ ಯುವ ಪಥ" ಯುವಜನ ಜಾಗೃತಿ ಕಾರ್ಯಕ್ರಮ ನಡೆಯಿತು. ಕಲ್ಲಡ್ಕದಲ್ಲಿ ಪುಷ್ಪಾರ್ಚನೆ ಮೂಲಕ ವಿವೇಕ ರಥವನ್ನು ಸ್ವಾಗತಿಸಿ, ಮೆರವಣಿಗೆಯ ಮೂಲಕ ಮಹಾವಿದ್ಯಾಲಯದ ಅಂಗಣಕ್ಕೆ ಬರಮಾಡಿಕೊಂಡು ನಂತರ ಆಜಾದ್ ಭವನದಲ್ಲಿ ಇದರ ಸಭಾ ಕಾರ್ಯಕ್ರಮ ನಡೆಯಿತು.

Be good; Do good ಎಂಬ ಸಂದೇಶ ಹೊಂದಿದ ವಿವೇಕ ಬಂಧವನ್ನು ಕೈಗೆ ತೊಡಿಸುವ ಕಾರ್ಯಕ್ರಮ ಹಾಗೂ ಶಿಕ್ಷಣ ದರ್ಶಿನಿ ಬಿಡುಗಡೆ ಕಾರ್ಯಕ್ರಮವು ನಡೆಯಿತು. ಗಾಯಕಿಯರಿಬ್ಬರಿಂದ ದೇಶಭಕ್ತಿ ಗೀತೆಗಳ ಗಾಯನವು ಎಲ್ಲರ ಮನ ತುಂಬಿತು. ಬಂಟ್ವಾಳ ಶಾಸಕ ಶ್ರೀ ರಾಜೇಶ್ ನಾಯಕ್ ಡಾ। ಪ್ರಭಾಕರ ಭಟ್, ಕಲ್ಲಡ್ಕ, ದ.ಕ ಯುವಜನ ಒಕ್ಕೂಟದ ನಿರ್ದೇಶಕರಾದ ಶ್ರೀ ರಾಕೇಶ್ ರೈ ಕೆಡೆಂಜಿ, ಜಿಲ್ಲಾಧ್ಯಕ್ಷ ಸುರೇಶ್ ರೈ, ಪ್ರಾಂಶುಪಾಲರು, ಕ್ರೀಡಾ ಇಲಾಖೆ ಮಂಗಳೂರಿನ ಅಧಿಕಾರಿ ಶ್ರೀ ಮಾಮಚ್ಚನ್ ಎಂ, ಶ್ರೀ ದಿನೇಶ್ ಅಮ್ಟೂರು ಉಪಸ್ಥಿತರದ್ದರು.

**"ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಬುಡಕಟ್ಟು ವೀರರ ಕೊಡುಗೆ"** 16.01.23



ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕುಂದು ಕೊರತೆ ನಿರ್ಮೂಲನಾ ಘಟಕದ ಆಶ್ರಯದಲ್ಲಿ "ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಬುಡಕಟ್ಟು ವೀರರ ಕೊಡುಗೆ (ಪರಿಶಿಷ್ಟ ಜಾತಿ, ಪಂಗಡಗಳ ಪಾತ್ರ)" ಎಂಬ ವಿಷಯದ ಕುರಿತು ಉಪನ್ಯಾಸ ನಡೆಯಿತು. ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ, ವನವಾಸಿ ಕಲ್ಯಾಣ ಆಶ್ರಮದ ಶ್ರೀ ಶ್ರೀಪಾದ ಇವರು ಈ ಉಪನ್ಯಾಸವನ್ನು ನಡೆಸಿಕೊಟ್ಟರು. ಎಲೆ ಮರೆಯ ಕಾಯಿಗಳಂತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡು ಬ್ರಿಟಿಷರ ವಿರುದ್ಧ ಹೋರಾಡಿ ಜೈಲುವಾಸ, ಗಲ್ಲು ಶಿಕ್ಷೆಗೆ ಗುರಿಯಾಗಿ ಪ್ರಾಣತ್ಯಾಗ ಮಾಡಿದ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ತಿಲಕ್ ಮಾಂಜಿ, ಬಿರ್ಸಾ ಮುಂಡ, ರಾಣಾ ಪೂಂಜಾ ವೀರ್, ತೋರೋ ಸಿಂಗ್ ಇತ್ಯಾದಿ ವೀರರ ಬಗ್ಗೆ ತಿಳಿಸಿಕೊಟ್ಟರು. ಶ್ರೀಮತಿ ಸುಕನ್ಯಾ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಲಾ ವಿದ್ಯಾರ್ಥಿನಿ ಕು. ಪದ್ಮಶ್ರೀ ವೈಯಕ್ತಿಕ ಗೀತೆ ಹಾಡಿ, ವಾಣಿಜ್ಯ ವಿದ್ಯಾರ್ಥಿನಿ ಕು. ನವಿತಾ ಸ್ವಾಗತಿಸಿ, ನಿರೂಪಿಸಿ ವಂದಿಸಿದರು.

**ಕಷ್ಟಕ್ಕೆ ಸ್ಪಂದಿಸಿದ ಮಾನವಿಕ ಸಂಘ:**



ಶಾಲಾ ವಾಹನ ಚಾಲಕರೊಬ್ಬರ ಮಗುವೊಂದು ಶ್ವಾಸಕೋಶದ ಸಮಸ್ಯೆಯಿಂದ ಬಳಲುತ್ತಿದ್ದು ಚಿಕಿತ್ಸೆಗಾಗಿ ದೊಡ್ಡ ಮೊತ್ತದ ಅಗತ್ಯವಿದ್ದು, ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ಮಾನವಿಕ ಸಂಘವು ಅವರ ಕಷ್ಟಕ್ಕೆ ಸ್ಪಂದಿಸಿ ನಿಧಿ ಸಂಗ್ರಹಿಸಿ ಅವರಿಗೆ ನೀಡಿರುತ್ತಾರೆ.

**ಶೈಕ್ಷಣಿಕ ವಿಚಾರ ಸಂಕಿರಣ 19.01.23**

ರಾಮಕೃಷ್ಣ ಆಶ್ರಮದಲ್ಲಿ ನಡೆದ ಶೈಕ್ಷಣಿಕ ವಿಚಾರ ಸಂಕಿರಣ ಕಾರ್ಯಾಗಾರದಲ್ಲಿ ಭವಿಷ್ ಘಟಕದ 50 ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರಾದ ಶ್ರೀಮತಿ ಜಯಲಕ್ಷ್ಮೀ ಮಾತಾಜಿ ಶ್ರೀ. ಗಂಧರ್ವ ಶ್ರೀಮಾನ್ ಹಾಗೂ ಸಂಧ್ಯಾ ಮಾತಾಜಿ ಭಾಗವಹಿಸಿದರು.

**NSS ವಿದ್ಯಾರ್ಥಿಗಳಿಂದ ತಡೆಗೋಡೆ ನಿರ್ಮಾಣ:**



ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ವಸುಧಾರಾ ಗೋಶಾಲೆಯ ಮುಂಭಾಗಕ್ಕೆ ತಡೆಗೋಡೆ ನಿರ್ಮಾಣದ ಕಾರ್ಯವನ್ನು 58 NSS ವಿದ್ಯಾರ್ಥಿಗಳು 3 ದಿನದ ಅವಧಿಯಲ್ಲಿ ಮಾಡಿದರು. ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜನಾ ಅಧಿಕಾರಿಯಾದ ಶ್ರೀ ಯತಿರಾಜ್, ಕು. ದೀಕ್ಷಿತಾ ಮಾತಾಜಿ ಹಾಗೂ ಶ್ರೀಮತಿ ಸುಕನ್ಯಾ ಮಾತಾಜಿ ಉಪಸ್ಥಿತರಿದ್ದರು.

**"ವಿದ್ಯಾರ್ಥಿ ಶಕ್ತಿ-ರಾಷ್ಟ್ರ ಶಕ್ತಿ" ಜಿಲ್ಲಾ ಸಮ್ಮೇಳನ: 25.01.23**

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮಂಗಳೂರು, ಇದರ ವತಿಯಿಂದ" ವಿದ್ಯಾರ್ಥಿ ಶಕ್ತಿ-ರಾಷ್ಟ್ರ ಶಕ್ತಿ" ಎಂಬ ಪರಿಕಲ್ಪನೆಯಡಿಯಲ್ಲಿ ಜಿಲ್ಲಾ ಸಮ್ಮೇಳನವು ಮಂಗಳೂರು ನಗರದ ಟಿ.ವಿ.ರಮಣ್ ಪೈ ಸಭಾಂಗಣದಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಕಾಲೇಜಿನ 66 ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

**"ನನ್ನ ಏಳಿಗೆಗೆ ನಾನೇ ಶಿಲ್ಪಿ" ಸಾಂಸ್ಕೃತಿಕ ಕಾರ್ಯಕ್ರಮ 02.01.2023:**

ಶ್ರೀರಾಮ ಪದವಿ ಮಹಾವಿದ್ಯಾಲಯದಲ್ಲಿ ದ್ವಿತೀಯ ಪದವಿ ವಿದ್ಯಾರ್ಥಿಗಳಿಂದ " ನನ್ನ ಏಳಿಗೆಗೆ ನಾನೇ ಶಿಲ್ಪಿ" ಎಂಬ ಶೀರ್ಷಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಪ್ರಾರ್ಥನಾ ನೃತ್ಯ, mime show, ಮುಂತಾದ ಪ್ರಹಸನಗಳು ಹಾಗೂ ನೃತ್ಯಗಳ ಪ್ರದರ್ಶನ ನಡೆಯಿತು. ಪದವಿಪೂರ್ವ ವಿಭಾಗದ ಭೌತಶಾಸ್ತ್ರ ಉಪನ್ಯಾಸಕ ಶ್ರೀ ಬಾಲಕೃಷ್ಣ ಅನಿಸಿಕೆಗಳನ್ನು ನುಡಿದರು. ಪದವಿ ಕಾಲೇಜಿನ ಉಪನ್ಯಾಸಕ ಶ್ರೀ ಗಂಧರ್ವ ಹಾಗೂ ಶ್ರೀಮತಿ ಸುಕನ್ಯಾ ಮಾತಾಜಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

**ಗಣರಾಜ್ಯೋತ್ಸವ 26.1.23**

ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕಲ್ಲಡ್ಕ ಶಾಖೆಯ ಬ್ಯಾಂಕ್ ಆಫ್ ಬರೋಡಾದ ಪ್ರಬಂಧಕರಾದ ಶ್ರೀ ಸದಾಶಿವ ಅವರು ಧ್ವಜಾರೋಹಣಗೈದರು. ಡಾ. ಪ್ರಭಾಕರ ಭಟ್ ಕಲ್ಲಡ್ಕ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕವರ್ಗದವರು ಉಪಸ್ಥಿತರಿದ್ದರು. ರಾಜ್ಯಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಜಯಲಕ್ಷ್ಮಿ ಸ್ವಾಗತಿಸಿ, ನಿರೂಪಿಸಿ ವಂದಿಸಿದರು.

**ಉಪನ್ಯಾಸಕರ ಪ್ರವಾಸ** 31.1.23–1.2.23



ತಮಿಳುನಾಡಿನ ಕೊಯಮತ್ತೂರಿನ ಸದ್ಗುರು ಜಗ್ಗಿ ವಾಸುದೇವ್ ಅವರ ಯೋಗ ಮತ್ತು ಧ್ಯಾನ ಕೇಂದ್ರ (ಈಶ ಫೌಂಡೇಶನ್) ಇಲ್ಲಿಗೆ ಆಯೋಜಿಸಲಾದ ಪ್ರವಾಸದಲ್ಲಿ ಪದವಿ ವಿಭಾಗದ 21ಮಂದಿ ಬೋಧಕ-ಬೋಧಕೇತರರು ಭಾಗವಹಿಸಿದ್ದರು.

# ಪ್ರೌಢಶಾಲೆ



**ಯೋಗಥಾನ್ ಕಾರ್ಯಕ್ರಮದಲ್ಲಿ ಭಾಗಿ 15.1.23**

ಮೂಡಬಿದ್ರೆ ಆಳ್ವಾಸ್‌ನ ಸಭಾಂಗಣದಲ್ಲಿ ಗಿನ್ನಿಸ್ ದಾಖಲೆಯ ಯೋಗಥಾನ್ ಕಾರ್ಯಕ್ರಮದಲ್ಲಿ ಪ್ರೌಢಶಾಲೆಯ 150 ವಿದ್ಯಾರ್ಥಿಗಳು ಭಾಗವಹಿಸಿದರು.



**ಪೆರೇಡ್‌ನಲ್ಲಿ ಭಾಗಿ 26.01.2023**

ತಾಲೂಕು ಪಂಚಾಯತ್ ಬಿ.ಸಿ ರೋಡಿನಲ್ಲಿ ನಡೆದ ಗಣರಾಜ್ಯೋತ್ಸವ ಪೆರೇಡ್ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಘೋಷ್ ತಂಡ ಭಾಗವಹಿಸಿತು.



**ಪರೀಕ್ಷಾ ಪೇ ಚರ್ಚಾ ವೀಕ್ಷಣೆ 27.1.23**

ಪ್ರಧಾನ ಮಂತ್ರಿ ಮಾನ್ಯ ಶ್ರೀ ನರೇಂದ್ರ ಮೋದಿಯವರು ನಡೆಸಿಕೊಡುತ್ತಿರುವ ಪರೀಕ್ಷಾ ಪೇ ಚರ್ಚಾ ಕಾರ್ಯಕ್ರಮದ ನೇರಪ್ರಸಾರವನ್ನು ವೀಕ್ಷಿಸುತ್ತಿರುವ ವಿದ್ಯಾರ್ಥಿಗಳು

# ಸೆಕೆಂಡರಿ ಸ್ಕೂಲ್




**ಪ್ರತಿಭಾ ಪುರಸ್ಕಾರ**

2022–23ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ, ಪ್ರತಿಭೆಗಳನ್ನು ವಿದ್ಯಾಕೇಂದ್ರದ ಹಿರಿಯರು ಪುರಸ್ಕರಿಸಿ, ಅಭಿನಂದಿಸಿದರು.



**ರಥಸಪ್ತಮಿ 28.01.23**

ರಥಸಪ್ತಮಿ ಪ್ರಯುಕ್ತ ನಡೆದ ಸೂರ್ಯ ನಮಸ್ಕಾರ ಕಾರ್ಯಕ್ರಮವನ್ನು ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ರಾಜೇಶ್ ಇವರು ನಿರ್ವಹಿಸಿದರು.



**ಯೋಗಥಾನ್ ಕಾರ್ಯಕ್ರಮ 15.01.2023**

ಸೆಕೆಂಡರಿ ಸ್ಕೂಲ್‌ನ 55 ವಿದ್ಯಾರ್ಥಿಗಳು ಆಳ್ವಾಸ್ ಕಾಲೇಜು ಮೂಡಬಿದ್ರೆಯಲ್ಲಿ ನಡೆದ ಯೋಗಥಾನ್ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

# ಪದವಿ ಪೂರ್ವ



**ಗ್ರಾಮ ಪಂಚಾಯತಿಗೆ ಭೇಟಿ 04/1/23**

ಭಗೀರಥ ಮಾನವಿಕ ಸಂಘದ ವತಿಯಿಂದ ಪ್ರಥಮ ಮತ್ತು ದ್ವಿತೀಯ ಕಲಾ ವಿಭಾಗದ ವಿದ್ಯಾರ್ಥಿಗಳು ಬಾಳ್ತಿಲ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ಪಂಚಾಯತ್ ರಾಜ್ ವ್ಯವಸ್ಥೆ, ಕಾರ್ಯವೈಖರಿ, ಸರಕಾರದ ಯೋಜನೆ ಮೊದಲಾದ ವಿಷಯಗಳ ಬಗ್ಗೆ ಮಾಹಿತಿಯನ್ನು ಪಡೆದರು.



**ವೃತ್ತಿ ಮಾರ್ಗದರ್ಶನ 18.01.22**

ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನ ಶ್ರೀ ಸುದರ್ಶನ್ ಎಂ. ಎಲ್. ಭಟ್, ಶ್ರೀ ಹರೀಶ್, ನಿಟ್ಟೆ ವಿಶ್ವವಿದ್ಯಾನಿಲಯ ಹಿರಿಯ ಶೈಕ್ಷಣಿಕ ಸಲಹೆಗಾರರಾದ ಶ್ರೀಮತಿ ಜಮುನಾ ದ್ವಿತೀಯ ಪಿ ಯು ಸಿ ಯ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ವೃತ್ತಿ ಪರ ಮಾರ್ಗದರ್ಶನ ನೀಡಿದರು.




**ಪ್ರತಿಭಾ ಪುರಸ್ಕಾರ ಕಾರ್ಯಕ್ರಮ 13.01.23**

ಪ್ರತಿಭಾ ಪುರಸ್ಕಾರದಲ್ಲಿ ಡಾ॥ ಕಲ್ಲಡ್ಕ ಪ್ರಭಾಕರ್ ಭಟ್, ಶ್ರೀ ಶಾರದಾ ಪ್ರೌಢಶಾಲೆಯ ಸಂಚಾಲಕರಾದ ಡಾ॥ ಶ್ರೀ ವಿಶ್ವನಾಥ್ ನಾಯಕ್, ಶ್ರೀ ವಸಂತ ಮಾಧವ, ಶ್ರೀ ನಾಗೇಶ್ ಕಲ್ಲಡ್ಕ, ಮತ್ತು ಪ್ರಾಂಶುಪಾಲರು ಉಪಸ್ಥಿತರಿದ್ದರು. ಕ್ರೀಡೆ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.



**ರಥಸಪ್ತಮಿ 28.01.23**

ರಥಸಪ್ತಮಿ ಪ್ರಯುಕ್ತ ನಡೆದ ಸೂರ್ಯ ನಮಸ್ಕಾರ ಕಾರ್ಯಕ್ರಮವನ್ನು ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕರುಣಾಕರ ನಿರ್ವಹಿಸಿದರು. ಒಟ್ಟು 650 ವಿದ್ಯಾರ್ಥಿಗಳು ವಿವಿಧ ಗುಂಪುಗಳಲ್ಲಿ ಸೂರ್ಯನಮಸ್ಕಾರಗೈದರು.



**ಕಿರು ಪ್ರವಾಸ 07.01.23:** ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಒಂದು ದಿನದ ಕಿರು ಪ್ರವಾಸವನ್ನು ಆನೆಗುಡ್ಡೆ, ಯಾಣ, ಹೊನ್ನಾವರ, ಮುರುಡೇಶ್ವರಕ್ಕೆ ಆಯೋಜಿಸಲಾಗಿತ್ತು. 146 ವಿದ್ಯಾರ್ಥಿಗಳು ಮತ್ತು 7 ಉಪನ್ಯಾಸಕರು ಭೇಟಿ ನೀಡಿದರು.



**ಅಂತರ್ ಕಾಲೇಜು ಖೋ ಖೋ ಪಂದ್ಯಾಟದಲ್ಲಿ 2.1.23**

ಕಾರ್ಕಳದ ಭುವನೇಂದ್ರ ಕಾಲೇಜಿನಲ್ಲಿ ನಡೆದ ಮಂಗಳೂರು ವಿ.ವಿ ಅಂತರ್ ಕಾಲೇಜು ಮಟ್ಟದ ಮಹಿಳೆಯರ ಖೋ ಖೋ ಪಂದ್ಯಾಟದಲ್ಲಿ ಭಾಗವಹಿಸಿದ ತಂಡ.



**ವಾರ್ಷಿಕ ಕ್ರೀಡಾಕೂಟ: 14/01/2023**

ವಾರ್ಷಿಕ ಕ್ರೀಡಾಕೂಟವನ್ನು ಶ್ರೀ ಸದಾಶಿವ ಶೆಟ್ಟಿ ಕೂಳೂರು ಇವರು ದೀಪ ಬೆಳಗಿ, ಧ್ವಜಾರೋಹಣ ಮಾಡಿ ಉದ್ಘಾಟಿಸಿದರು. ಡಾ। ಪ್ರಭಾಕರ ಭಟ್, ಶ್ರೀ ನಾರಾಯಣ ಸೋಮಯಾಜಿ, ಶ್ರೀ ವಸಂತ ಮಾಧವ ಉಪಸ್ಥಿತರಿದ್ದರು.



**ರಥಸಪ್ತಮಿ 28.1.23**

ರಥಸಪ್ತಮಿ ಪ್ರಯುಕ್ತ ವಿದ್ಯಾರ್ಥಿಗಳಿಂದ ಸೂರ್ಯ ನಮಸ್ಕಾರ ನಡೆಯಿತು. ಪ್ರಾಂಶುಪಾಲರಾದ ಶ್ರೀ ಕೃಷ್ಣಪ್ರಸಾದ್ ರಥಸಪ್ತಮಿ ಮತ್ತು ಸೂರ್ಯ ನಮಸ್ಕಾರದ ಪ್ರಾಮುಖ್ಯತೆಯನ್ನು ತಿಳಿಸಿದರು.



**ಗಣರಾಜ್ಯೋತ್ಸವ 26.1.2023**

ಕಲ್ಲಡ್ಕ ಬ್ಯಾಂಕ್ ಆಫ್ ಬರೋಡಾದ ಪ್ರಬಂಧಕರಾದ ಶ್ರೀ ಸದಾಶಿವ ಇವರಿಂದ ಧ್ವಜಾರೋಹಣ ನೆರವೇರಿಸಲ್ಪಟ್ಟಿತು.



**ಕಷ್ಟಕ್ಕೆ ಸ್ಪಂದಿಸಿದ ಮಾನವಿಕ ಸಂಘ 5.1.23**

ಕಲ್ಲಡ್ಕ ಬಸ್ ನಿಲ್ದಾಣದಲ್ಲಿ ನಿರ್ಗತಿಕರಾಗಿದ್ದ ಕೃಷ್ಣಪ್ಪರವರ ಸಂಕಷ್ಟಕ್ಕೆ ಸಹಾಯ ಹಸ್ತ ನೀಡಿದ ಮಾನವಿಕ ಸಂಘದ ವಿದ್ಯಾರ್ಥಿಗಳು



**ವಿವೇಕ ರಥ 13.1.2023**

ವಿವೇಕಾನಂದ ಜಯಂತಿ ಅಂಗವಾಗಿ ಆಗಮಿಸಿದ ವಿವೇಕ ರಥವನ್ನು ಕಲ್ಲಡ್ಕ ಮುಖ್ಯ ರಸ್ತೆಯಿಂದ ಸ್ವಾಗತಿಸಿ ಬರಮಾಡಿಕೊಳ್ಳಲಾಯಿತು.



## ಶ್ರೀರಾಮ ಶಿಶುಮಂದಿರ
## ಕಲಿಕೆಯ ಹಾದಿಯಲ್ಲಿ ಈ ಬಾರಿ ಸೈಕಲ್ ಸವಾರಿ

ಶಿಶು ಶಿಕ್ಷಣದ ಮೂಲಕ ಸದಾ ಹೊಸತನಕ್ಕೆ ನಾಂದಿ ಹಾಡುತ್ತಾ, ಪ್ರಯೋಗಶೀಲತೆಗೆ ತೆರೆದುಕೊಳ್ಳುತ್ತಾ, ತಾನೂ ಬೆಳೆಯುತ್ತಾ ಮಕ್ಕಳನ್ನು ಬೆಳೆಸುತ್ತಾ ಮುಂದುವರೆಯುವ ಶಿಕ್ಷಣ ಪದ್ಧತಿಗೆ ಹೊಸತೊಂದು ಸೇರ್ಪಡೆ ಈ ಬೈಸಿಕಲ್... ಇದು ಕಲಿಸುವ ಪಾಠ ಒಂದೇ.... ಎರಡೇ....?

ಸಮತೋಲನ, ಸ್ವಾವಲಂಬನೆ, ಧೈರ್ಯ, ವಿಶ್ವಾಸ, ಪ್ರಕೃತಿ ಪ್ರೇಮ, ಸರಳತೆ, ದೈಹಿಕ ದೃಢತೆ, ಲಘು ವ್ಯಾಯಾಮ, ಮಿತ ವೇಗ, ನಿಯಂತ್ರಣ, ಇಂಧನ ರಹಿತ...

ವಿವರಣೆ 3ನೇ ಪುಟದಲ್ಲಿ...

ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

| | |
|---|---|
| ಚಿನ್ನಾಭರಣ ಸಾಲ | – 10.5% |
| ಜಾಮೀನು ಸಾಲ | – 16% |
| ಅಡವು ಸಾಲ | – 13% |
| ವಾಹನ ಸಾಲ | – 11.5% |
| ಗೃಹ ನಿರ್ಮಾಣ ಸಾಲ | – 11% |

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

| | |
|---|---|
| 91ದಿನಗಳವರೆಗೆ | – 6% |
| 92ರಿಂದ 181 ದಿನಗಳು | – 6.5% |
| 182 ರಿಂದ 364 ದಿನಗಳು | – 7.5% |
| 1 ವರ್ಷ ಮತ್ತು ಮೇಲ್ಪಟ್ಟು | – 8% |

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.

Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

ಸರಯೂ

KARKAN/2014/62363
Posted at Kalladka P.O.
on 10th and 15th of
Every month

Vol. : 9 Issue :9 Rs. 10/-

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Website : www.shriramakalladka.in / www.srvk.org E-mail : info@srvk.org

BOOK POST

ಸವಿದೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763 Printed at Digantha Mudrana Ltd. Magaluru 575008, Bantwal Tq., Dakshina Kannada, Karnataka. Registration No. : KARKAN/2014/62363